150 (236) ಶ್ರೀ ಸಿದ್ಧು ಸಾವದಿ (ಜಮಖಂಡಿ) ಮಾನ್ಯ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದ ಗ್ರಾಮೀಣ ಪ್ರದೇಶದಲ್ಲಿರುವ ಕುಟುಂಬಗಳೆಷ್ಟು , ಆ ಪೈಕಿ ಸ್ವಂತ ಶೌಚಾಲಯಗಳನ್ನು ಹೊಂದಿರುವುದೆಷ್ಟು ,

ಆ) ಬಯಲು ಶೌಚಾಲಯವೆಂಬ ಅನಿಷ್ಟ ಪದ್ಧತಿಯನ್ನು ತೊಲಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ,

ಇ) ರಾಜ್ಯದಲ್ಲಿ ಶೌಚಾಲಯಗಳಿಲ್ಲದ ಮನೆಗೆ ಶೌಚಾಲಯ ಕಟ್ಟಿಸುವ ಯೋಜನೆ ಸರ್ಕಾರಕ್ಕಿದೆಯೇ (ವಿವರ ನೀಡುವುದು) ,

ಈ) ಶೌಚಾಲಯಗಳ ನಿರ್ಮಾಣಕ್ಕಾಗಿ ಸಹಾಯ ಧನ ನೀಡುತ್ತಿರುವ ರೂ 1200/– ಅನ್ನು ರೂ 5000/–ಕ್ಕೆ ಹೆಚ್ಚಿಸಲಾಗುವುದೇ ?

ಶ್ರೀ ಎಸ್ ಎ ರವೀಂದ್ರ ನಾಥ್ (ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಮತ್ತು ಸಕ್ಕರೆ ಸಚಿವರು)

ಅ) 2004ರಲ್ಲಿ ನಡೆಸಿದ ತಳಮಟ್ಟದ ಸಮೀಕ್ಷೆ ಪ್ರಕಾರ ರಾಜ್ಯದಲ್ಲಿ ಒಟ್ಟು 69,62,238 ಗ್ರಾಮೀಣ ಕುಟುಂಬಗಳಿವೆ ಈ ಪೈಕಿ ರಾಜ್ಯದಲ್ಲಿ 24,90,474 ಕುಟುಂಬಗಳು ಶೌಚಾಲಯಗಳನ್ನು ಹೊಂದಿರುತ್ತವೆ

ಆ) ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ನೈರ್ಮಲ್ಯವನ್ನು ಕಾಪಾಡುವ ಹಾಗೂ ಬಯಲು ಮಲವಿಸರ್ಜನೆಯಂತ ಅನಿಷ್ಟ ಪದ್ಧತಿಯನ್ನು ಸಂಪೂರ್ಣವಾಗಿ ತೊಡೆದು ಹಾಕುವ ಉದ್ದೇಶದಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ಸಂಪೂರ್ಣ ಸ್ವಚ್ಚತಾ ಆಂದೋಲನವನ್ನು ಅನುಷ್ಠಾನಗೊಳಿಸಲಾಗುತ್ತಿದೆ ಇದು ನಾಲ್ಕು ವರ್ಷಗಳ ಅವದಿಯ ಯೋಜನೆಯಾಗಿದ್ದು 2005 ರಿಂದ 2009 ರವರೆಗೆ ಜಾರಿಯಲ್ಲಿರುತ್ತದೆ .

ಗ್ರಾಮೀಣ ಪ್ರದೇಶದ ಎಲ್ಲ ಕುಟುಂಬಗಳೂ ಶೌಚಾಲಯವನ್ನು ಹೊಂದುವಂತೆ ಹಾಗೂ ಬಳಕೆ ಮಾಡುವಂತೆ ಮಾಹಿತಿ, ಶಿಕ್ಷಣ, ಸಂವಹನ ಚಟುವಟಿಕೆಗಳ ಮೂಲಕ ಅರಿವು ಮೂಡಿಸಲಾಗುತ್ತಿದೆ ಮತ್ತು ಬಡತನ ರೇಖೆಗಿಂತ ಕೆಳಗಿನ ಕುಟುಂಬಗಳು ಶೌಚಾಲಯ ನಿರ್ಮಿಸಿಕೊಂಡು ಬಳಕೆ ಮಾಡಿದಲ್ಲಿ ರೂ 1200/–ಗಳ ಸಹಾಯಧನ ನೀಡಲಾಗುತ್ತಿದೆ ಗ್ರಾಮೀಣ ಪ್ರದೇಶದ ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಿಗೆ ಶೌಚಾಲಯ ಸೌಲಭ್ಯಗಳನ್ನು ಒದಗಿಸುವ ಮೂಲಕ ಮಕ್ಕಳಲ್ಲಿ ಎಳೆಯ ವಯಸ್ಸಿನಿಂದಲೇ ಶುಚಿತ್ವದ ಅಭ್ಯಾಸಗಳನ್ನು ಉತ್ತೇಜಿಸಲಾಗುತ್ತಿದೆ ಈ ಮೂಲಕ ಬಯಲು

ಮಲವಿಸರ್ಜನಾ ಪದ್ಧತಿಯನ್ನು ತೊಡೆದುಹಾಕುವ ನಿಟ್ಟಿನಲ್ಲಿ ಸಂಪೂರ್ಣ ಸ್ವಚ್ಚತಾ ಆಂದೋಲನವನ್ನು ರಾಜ್ಯದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ

ಇ) ರಾಜ್ಯದಲ್ಲಿ ಸಂಪೂರ್ಣ ಸ್ವಚ್ಚತಾ ಆಂದೋಲನವು ಜಾರಿಯಲ್ಲಿದ್ದು ರಾಜ್ಯದ ಎಲ್ಲ ಗ್ರಾಮೀಣ ಕುಟುಂಬಗಳೂ ಶೌಚಾಲಯ ಹೊಂದುವ ಮೂಲಕ ಬರಲು ಮಲ ವಿಸರ್ಜನೆಯನ್ನು ಮುಕ್ತಗೊಳಿಸಲು ಉದ್ದೇಶಿಸಿ ಅನುಷ್ಠಾನಗೊಳುತ್ತಿದೆ ನಾಲ್ಕು ವರ್ಷಗಳ (2005–09) ಕಾಲಮಿತಿಯ ಈ ಯೋಜನೆಯು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜಂಟಿ ಯೋಜನೆಯಾಗಿದ್ದು ಗ್ರಾಮ ಪಂಚಾಯತಿಗಳ ಮೂಲಕ ಅನುಷ್ಟಾನಗೊಳ್ಳುತ್ತಿದೆ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ತಲಾ ರೂ 1,200/– ಪ್ರೋತ್ಸಾಹ ಧನ ನೀಡಲಾಗುತ್ತಿದೆ

ಈ) ಇಲ್ಲ

151 (237) ಶ್ರೀ ಸಿದ್ದುಸಾವದಿ (ಜಮಖಂಡಿ) ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಜಮಖಂಡಿ ತಾಲ್ಲೂಕಿನಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿ ಪಡಿಸಲು ಕೈಗೊಂಡ ಕಾರ್ಯಕ್ರಮಗಳೇನು ,

ಆ) ದಿನಾಂಕ 01–04–2003 ರಿಂದ ಜಮಖಂಡಿ ತಾಲ್ಲೂಕಿನ ಮೀನುಗಾರಿಕೆಗೆ ಯಾವ ಯಾವ ಸೌಲಭ್ಯಗಳನ್ನು ನೀಡಲಾಗಿದೆ (ವಿವರ ನೀಡುವುದು) ,

ಇ) ಜಮಖಂಡಿ ತಾಲ್ಲೂಕಿನ ವರ್ಷವಾರು ಮೀನುಗಳ ಇಳುವರಿಯೆಷ್ಟು ,

ಈ) ಇತ್ತೀಚೆಗಿನ ದಿನಂಪ್ರತಿ ಇಳುವರಿಯೆಷ್ಟು , ಯಾವ ಜಾತಿ ಮೀನುಗಳನ್ನು ಬೇಸಾಯ ಮಾಡಲಾಗುವುದು ,

ಉ) ಮೀನುಗಳ ಮಾರಾಟಕ್ಕಾಗಿ ಸೌಕರ್ಯವನ್ನು ಒದಗಿಸಲಾಗಿದೆಯೇ ,

ಊ) ಜಮಖಂಡಿಯಲ್ಲಿಯ ಬಡ ಮೀನುಗಾರರಿಗೆ ಅವಶ್ಯವಿರುವ ಮನೆ, ಬಲೆ ಮತ್ತು ಶಿಧಲೀಕರಣ ಘಟಕಗಳನ್ನು ಯಾವಾಗ ಪೂರೈಸಲಾಗುವುದು ?